
TESS India

# Pair work for language and literacy

## ವಿಶ್ವಾಸಾರ್ಹ ಬರವಣಿಗೆ





Teacher Education through School-based Support in India
www.TESS-India.edu.in

The Open University
UKaid from the British people

CC BY SA
http://creativecommons.org/licenses/

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005) ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009)ಗಳು ಭಾರತದಲ್ಲಿನ ಶಿಕ್ಷಣಕ್ಕಾಗಿ ಮಹಾದಾಸೆಯ ದೃಷ್ಟಿಕೋನವನ್ನು ನೀಡಿವೆ. ಇದರಲ್ಲಿ ಎಲ್ಲಾ ಶಾಲೆಗಳು ಸದೃಢವಾದ ಕಲಿಕಾ ವಾತಾವರಣವನ್ನು ಒದಗಿಸುತ್ತವೆ. ಈ ದೃಷ್ಟಿ ಕೋನವನ್ನು ಸಾಕಾರಗೊಳಿಸಲು ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ಸಹಾಯ ಹಸ್ತ ನೀಡುವುದೇ ಟೆಸ್ - ಇಂಡಿಯಾOERನ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಶಿಕ್ಷಕರನ್ನು ಗಳೆಂದು ಪರಿಗಣಿಸಿ ಅವರು 'ವಿದ್ಯಾರ್ಥಿ' ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ ಸಾಧನ ಹಾಗೂ ವಿಧಾನಗಳನ್ನು ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ, ಬೋಧನೆಯ ಮತ್ತು ಕಲಿಕೆಯ ವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ರಚಿಸಲಾಗಿದೆ. OER ಮುಖ್ಯ ಲಕ್ಷಣವೆಂದರೆ ಶಿಕ್ಷಕರು ಘಟಕಗಳನ್ನು, ವೈಯಕ್ತಿಕ ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲ್ಯವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು.

ಎಲ್ಲಾ ವಿಷಯಗಳಿಗೂ ಹಾಗೂ ಎಲ್ಲಾ ಹಂತಗಳಿಗೂ ಅನ್ವಯವಾಗುವ ಈ ಪ್ರಮುಖ ಸಂಪನ್ಮೂಲಗಳು, ಭಾರತದ ಶಿಕ್ಷಣ ನೀತಿ ಮತ್ತು ಟೆಸ್ ಇಂಡಿಯಾ OERನಲ್ಲಿನ ಮಾದರಿಯಂತೆ ಶಿಕ್ಷಕರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ವಿಧಾನಗಳ ಬಗ್ಗೆ ಮುಂದುವರಿದ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತವೆ. ಟೆಸ್ ಇಂಡಿಯಾದ ಪ್ರಾಯೋಗಿಕ ತತ್ವಗಳನ್ನೊಳಗೊಂಡಂತೆ ವಿದ್ಯಾರ್ಥಿಗಳನ್ನು ಸಂಘಟಿಸುವ ವಿಧಾನಗಳು, ಕಲಿಕಾ ಚಟುವಟಿಕೆಗಳು ಮತ್ತು ಶಿಕ್ಷಕ-ವಿದ್ಯಾರ್ಥಿ ಮತ್ತು ವಿದ್ಯಾರ್ಥಿ ವಿದ್ಯಾರ್ಥಿಗಳ ನಡುವಿನ - ಒಡನಾಟವನ್ನು ಏರ್ಪಡಿಸುವ ವಿಧಾನಗಳನ್ನು ಒಳಗೊಂಡಿದೆ. ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ವೆಬ್‌ಸೈಟ್ ನಲ್ಲಿ ಈ ಪ್ರಮುಖ ಸಂಪನ್ಮೂಲಗಳು ಲಭ್ಯವಿದೆ.

**ವೀಡಿಯೋ ಸಂಪನ್ಮೂಲಗಳು**

ಟೆಸ್ ಇಂಡಿಯಾದವರು ತಯಾರಿಸಿದ ವೀಡಿಯೋ ಕ್ಲಿಪ್‌ಗಳ ಸಮೂಹವು ತರಗತಿಯಲ್ಲಿನ ಭಾಗವಹಿಸುವಿಕೆಯ ಪ್ರಮುಖ ತಂತ್ರಗಳನ್ನು ವಿವರಿಸುತ್ತವೆ. (ಪ್ರಮುಖ ಸಂಪನ್ಮೂಲಗಳ ವಿಷಯಗಳಿಗೆ ಸರಿಹೊಂದುವಂತೆ) ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಿಕೆಯ ಅಭ್ಯಾಸಗಳನ್ನು ಭಾರತೀಯ ತರಗತಿಗಳಲ್ಲಿ ಬಳಸುವುದನ್ನು ಈ ಕ್ಲಿಪ್ ಗಳಲ್ಲಿ ನಾವು ಕಾಣಬಹುದಲ್ಲದೇ, ನಿರ್ದಿಷ್ಟ ಕ್ರಿಯೆಗಳನ್ನು ಹಾಗೂ ನಡತೆಗಳನ್ನು ವೀಕ್ಷಕರು ಗುರುತಿಸಲು ವೀಕ್ಷಕ ವಿವರಣೆಯನ್ನು ಕೇಳಬಹುದು. ಈ ವೀಡಿಯೋ ಕ್ಲಿಪ್‌ಗಳನ್ನು ಹಿಂದಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ವಿವಿಧ ರಾಜ್ಯಗಳಿಗೆ ಅನುಗುಣವಾಗಿ ವೀಕ್ಷಕ ವಿವರಣೆಯನ್ನು ಭಾಷಾಂತರಿಸಲಾಗಿದೆ. ಈ ವೀಡಿಯೋ ಕ್ಲಿಪ್‌ಗಳಿಗೆ ಲಿಂಕ್‌ಗಳನ್ನು ವೀಡಿಯೋ ಚಿತ್ರದ ಮೂಲಕ OERಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ತೋರಿಸಿದ್ದು, ಅಂತರ್ಜಾಲದ ಮೂಲಕ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಈ ವೀಡಿಯೋ ಕ್ಲಿಪ್‌ಗಳನ್ನು ಟ್ಯಾಬ್ಲೆಟ್, ಪಿಸಿ, ಡಿ.ವಿ.ಡಿ, ಮೊಬೈಲ್ ಫೋನ್‌ಗಳಲ್ಲಿ ಹಾಗೂ ಎಸ್.ಡಿ ಕಾರ್ಡ್ ಮೂಲಕ ಬಳಸಲು ಬಳಕೆದಾರರು ಇವುಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. (http://www.tess-india.edu.in/)

*Version 2.0 LL09TESSKNV1*
*Karnataka*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

*TESS-India is led by The Open University UK and funded by UK aid from the UK government*

## ಈ ಘಟಕದಲ್ಲೇನಿದೆ?

ಈ ಘಟಕದಲ್ಲಿ, ನೀವು ತರಗತಿಯಲ್ಲಿ ಉದ್ದೇಶಪೂರ್ವಕ, ಸಂತಸದಾಯಕ, ವಿಶ್ವಾಸಾರ್ಹ ಬರವಣಿಗೆ ಚಟುವಟಿಕೆಗಳನ್ನು ಆಯೋಜನೆ ಮಾಡುವ ಮೂಲಕ ವಿದ್ಯಾರ್ಥಿಗಳ ಬರವಣಿಗೆ ಕೌಶಲವನ್ನು ಬೆಳೆಸಲು ಪ್ರೇರಣೆ ನೀಡುವುದರತ್ತ ಗಮನ ನೀಡಲಿದ್ದೀರಿ. ರಚನೆಗೂ ಮತ್ತು ನಕಲು ಮಾಡುವಿಕೆಗೂ ಇರುವ ವ್ಯತ್ಯಾಸಗಳನ್ನು ಪರಿಗಣಿಸುತ್ತಾ, ವಿವರವಾದ ಬರವಣಿಗೆ-ಕೇಂದ್ರಿತ ಪಾಠಯೋಜನೆಯನ್ನು ಮಾಡಲಿದ್ದೀರಿ ಹಾಗೂ ನಿಮ್ಮ ವಿದ್ಯಾರ್ಥಿಗಳೊಂದಿಗೆ ಪಾಲುದಾರಿಕೆಯ ಮತ್ತು ಸಹಯೋಗಿಕ ಬರವಣಿಗೆಯನ್ನು ಪ್ರಯತ್ನಿಸಲಿದ್ದೀರಿ.

## ಈ ಘಟಕದಲ್ಲಿ ನೀವೇನು ಕಲಿಯಬಹುದು?

- ನಿಮ್ಮ ವಿದ್ಯಾರ್ಥಿಗಳ ಬರವಣಿಗೆಗೆ ಉದ್ದೇಶಗಳು ಮತ್ತು ವಿಶ್ವಾಸಾರ್ಹ ಓದುಗರನ್ನು ಗುರುತಿಸುವ ರೀತಿ
- ನಿಮ್ಮ ವಿದ್ಯಾರ್ಥಿಗಳ ಬರವಣಿಗೆ ಪಾಠಗಳಲ್ಲಿ ರಚನೆ ಮತ್ತು ನಕಲು ಮಾಡುವಿಕೆಗಳನ್ನು ಸಮತೋಲನ ಮಾಡುವ ಬಗೆ
- ಅಂತರ್ ಕ್ರಿಯಾತ್ಮಕ ಮತ್ತು ಸಾಮಾಜೀಕರಣಗೊಳಿಸುವ ಕಲಿಕೆಯನ್ನು ಪ್ರೋತ್ಸಾಹಿಸುವಂತಹ ಎಲ್ಲರೂ ಸೇರಿ ಒಟ್ಟಾಗಿ ಬರೆಯುವಂತಹ ಚಟುವಟಿಕೆಗಳನ್ನು ಯೋಜಿಸುವ ರೀತಿ

## ಈ ಮಾರ್ಗ ಏಕೆ ಮುಖ್ಯ?

ಬರವಣಿಗೆ ಯಾವಾಗಲೂ ಓದುಗರನ್ನು ಹೊಂದಿರುತ್ತದೆ. ಅವರು ತಾವೇ ಆಗಿರಬಹುದು. ಅದೇ ರೀತಿ, ಪ್ರತಿ ಬರವಣಿಗೆಯು ಒಂದು ಉದ್ದೇಶವನ್ನು ಹೊಂದಿರುತ್ತದೆ, ಅದು ಮಾರುಕಟ್ಟೆಯಲ್ಲಿ ಅಕ್ಕಿಯನ್ನು ಕೊಳ್ಳಲು ಬರೆದುಕೊಂಡ ಜ್ಞಾಪನವಷ್ಟೇ ಆಗಿದ್ದರೂ. ಶಾಲೆಗಳಲ್ಲಿ ಕೆಲವೊಮ್ಮೆ ಯಾಂತ್ರಿಕ ರೂಪದ ಅಭ್ಯಾಸವಾಗಿದ್ದರಂತೂ, ಬರವಣಿಗೆ ಕಾರ್ಯಗಳು ವಿಶ್ವಾಸಾರ್ಹ ಓದುಗ ಮತ್ತು ಉದ್ದೇಶವನ್ನು ಹೊಂದಿರುವುದೇ ಇಲ್ಲ. ಒಂದು ವೇಳೆ ಬರವಣಿಗೆ ಕಾರ್ಯಗಳು ವಿಶ್ವಾಸಾರ್ಹವಾಗಿಲ್ಲದಿದ್ದಲ್ಲಿ, ಬಹಳಷ್ಟು ಏಕೆ ಬರೆಯಬೇಕು ಹಾಗೂ ಈ ಕೌಶಲದ ಪ್ರಾವೀಣ್ಯತೆ ಎಷ್ಟು ಆನಂದದಾಯಕ ಮತ್ತು ಸೃಜನಶೀಲವಾದುದು ಎಂಬುದನ್ನು ವಿದ್ಯಾರ್ಥಿಗಳು ಮೆಚ್ಚಿಕೊಳ್ಳಲಾರರು.

ಬರವಣಿಗೆ ಅಭಿವೃದ್ಧಿಯಲ್ಲಿ ಎರಡು ಅಂಶಗಳಿವೆ: ರಚನೆ ಮತ್ತು ನಕಲು ಮಾಡುವಿಕೆ (composition and transcription)

- ರಚನೆಯು, ಬರವಣಿಗೆಯನ್ನು ಯಾರು ಓದುತ್ತಾರೆ (ಓದುಗ) ಮತ್ತು ಅದು ಸಾಧಿಸಬಯಸುವುದು ಏನನ್ನು (ಉದ್ದೇಶ), ಹೊಳಹುಗಳ ಉತ್ಪತ್ತಿ-ಸಂಘಟನೆ ಹಾಗೂ ಬಳಸುವ ಭಾಷಾ ಶೈಲಿಯ ಕುರಿತ ಆಯ್ಕೆಗಳನ್ನು ಹೊಂದಿರುವುದರಿಂದ ಅದನ್ನು 'ಲೇಖಕನ ಪಾತ್ರ'ವೆಂದು ಪರಿಗಣಿಸಬಹುದು
- ನಕಲು ಮಾಡುವಿಕೆಯು ಅಂದವಾದ ಬರವಣಿಗೆ, ಅಕ್ಷರಗಳ ಸರಿಯಾದ ಬಳಕೆ, ನಿರ್ದಿಷ್ಟ ಲೇಖನ ಚಿಹ್ನೆಗಳು ಹಾಗೂ ಸೂಕ್ತವಾದ ಪಠ್ಯ ಚೌಕಟ್ಟು (text layout)ಗಳನ್ನು ಒಳಗೊಂಡಿರುವುದರಿಂದ ಇದನ್ನು 'ಕಾರ್ಯದರ್ಶಿಯ ಪಾತ್ರ'ವೆಂದು ಹೇಳಬಹುದು

ಶಿಕ್ಷಕರು ಸಾಮಾನ್ಯವಾಗಿ ವಿದ್ಯಾರ್ಥಿಗಳಿಗೆ ನಕಲು ಮಾಡುವ ಕಾರ್ಯಗಳನ್ನು ಹೆಚ್ಚು ಕೊಟ್ಟು, ಅದನ್ನು ತಿದ್ದುವ ಮತ್ತು ವಿವರಿಸುವುದಕ್ಕೆ, ತಮ್ಮ ಸಮಯ ವ್ಯಯಿಸುತ್ತಾರೆ. ಆದರೆ, ಈ ಎರಡರಲ್ಲಿ, ಅತಿ ಮುಖ್ಯವಾಗಿ ವಿದ್ಯಾರ್ಥಿಗಳು ಪ್ರಾವೀಣ್ಯತೆ ಗಳಿಸಬೇಕಾದುದೆಂದರೆ, ಅದು ರಚನೆ.

ವಿದ್ಯಾರ್ಥಿಗಳು ತಮಗೆ ಆಸಕ್ತಿ ಮತ್ತು ಸ್ಪೂರ್ತಿ ತುಂಬುವ ಬರವಣಿಗೆ ಕಾರ್ಯದಲ್ಲಿ ತೊಡಗಿದ್ದಾಗ - ಅಂದರೆ - ತಮ್ಮ ಲೇಖನ ಕೌಶಲಗಳನ್ನು ಅಭಿವೃದ್ಧಿಪಡಿಸಿಕೊಳ್ಳುವಾಗ, ಅವರು ಉಪಕೌಶಲಗಳಾದ ಕೈಬರವಣಿಗೆ, ಅಕ್ಷರ, ಲೇಖನ ಚಿಹ್ನೆ ಮತ್ತು ವಾಕ್ಯವೃಂದ (Paragraph)ಗಳನ್ನು ಕೂಡ ಅಭ್ಯಾಸ ಮಾಡುವರು, ಇದಕ್ಕೆ ವಿರುದ್ಧವಾದುದು ಅನುಸರಣೆಯಾಗುವುದಿಲ್ಲ. ಅಂದರೆ ನಕಲು ಮಾಡುವಿಕೆಯಿಂದಾಗಿ ರಚನಾ ಕೌಶಲಗಳಿಸಲಾಗುವುದಿಲ್ಲ. ಆದ್ದರಿಂದ ಹೆಚ್ಚು ವಿಶ್ವಾಸಾರ್ಹ ಬರವಣಿಗೆ ಕಾರ್ಯಗಳನ್ನು ಪರಿಚಯಿಸುವುದರಿಂದ, ವಿದ್ಯಾರ್ಥಿಗಳು ಅರ್ಥಪೂರ್ಣ ಬರವಣಿಗೆಗಳ ಸ್ವತಂತ್ರ ಲೇಖಕರಾಗುತ್ತಾರೆ.

## 1 ನೈಜ ಪ್ರಪಂಚದಲ್ಲಿನ ಬರವಣಿಗೆ

### ಚಟುವಟಿಕೆ 1: ನೈಜ ಪ್ರಪಂಚದಲ್ಲಿನ ಬರವಣಿಗೆ

ನಿಮ್ಮ ಶಾಲೆ ಮತ್ತು ಸಮುದಾಯದ ಸುತ್ತಮುತ್ತ ಯಾವ ರೀತಿಯ ಬರವಣಿಗೆಯನ್ನು ಕಾಣುತ್ತೀರಿ? ಸಹೋದ್ಯೋಗಿಯ ಜೊತೆಗೂಡಿ, ಒಂದು ಪಟ್ಟಿಮಾಡಿ. ಉದಾಹರಣೆಗೆ:

- ಸಂಚಾರ ನಿಯಮ/ಚಿಹ್ನೆಗಳು
- ಜಾಹೀರಾತುಗಳು
- ವೇಳಾಪಟ್ಟಿಗಳು
- ಆರೋಗ್ಯ ಭಿತ್ತಿ ಪತ್ರಗಳು
- ರಾಜಕೀಯ ಘೋಷಣೆಗಳು
- ಕ್ಯಾಲೆಂಡರ್ ಗಳು
- ಧಾರ್ಮಿಕ ನುಡಿಗಳು
- ನಿಯತಕಾಲಿಕೆಗಳು
- ಸುದ್ದಿ ಪತ್ರಿಕೆಗಳು
- ಪುಸ್ತಕಗಳು
- ಸಿನಿಮಾ ಪೋಸ್ಟರ್ ಗಳು
- ಶಾಲಾ ಪ್ರಕಟಣೆಗಳು
- ವಿಷಯಾನುಸಾರ ಚಾರ್ಟ್ ಗಳು
- ದಾಖಲಾತಿ ಚಾರ್ಟ್ ಗಳು



| ದಿನ | ಬಿಸಿಯೂಟ |
|---|---|
| ಸೋಮವಾರ | ಬಿಸಿಬೇಳೆಬಾತ್ |
| ಮಂಗಳವಾರ | ಅನ್ನ - ಸಾಂಬಾರ್ |
| ಬುಧವಾರ | ತರಕಾರಿ ಪುಲಾವ್ |
| ಗುರುವಾರ | ಅನ್ನ - ಸಾಂಬಾರ್ |
| ಶುಕ್ರವಾರ | ಪೊಂಗಲ್ |
| ಶನಿವಾರ | ಕೇಸರಿ ಬಾತ್- ಖಾರಾಬಾತ್ |

**ಚಿತ್ರ 1** ಶಾಲೆಯಲ್ಲಿನ ಬಿಸಿಯೂಟದ ಪಟ್ಟಿ

ಈಗ ಈ ಎರಡು ಗುಂಪಿನ ಪ್ರಶ್ನೆಗಳಿಗೆ ಉತ್ತರಿಸಿ:

- ಗುಂಪು 1:
  - ನಿಮ್ಮ ವಿದ್ಯಾರ್ಥಿಗಳು ಅವರ ಮನೆ ಅಥವಾ ಸಮುದಾಯದಲ್ಲಿ ಯಾವ ಬರವಣಿಗೆಯನ್ನು ನೋಡುತ್ತಾರೆ ಎಂದು ನಿಮಗನ್ನಿಸುತ್ತದೆ?
  - ಈ ಬರವಣಿಗೆಯ ಉದ್ದೇಶಿತ ಓದುಗ ಯಾರು?
  - ಈ ಬರವಣಿಗೆಯ ಉದ್ದೇಶ ಏನು?
- ಗುಂಪು 2:
  - ನಿಮ್ಮ ವಿದ್ಯಾರ್ಥಿಗಳು ಶಾಲೆಯಲ್ಲಿ ಯಾವುದನ್ನು ಬರೆಯುತ್ತಾರೆ?
  - ಈ ಬರವಣಿಗೆಯ ಉದ್ದೇಶಿತ ಓದುಗ ಯಾರು?
  - ಈ ಬರವಣಿಗೆಯ ಉದ್ದೇಶ ಏನು?

  ನಿಮ್ಮ ವಿದ್ಯಾರ್ಥಿಗಳು ಶಾಲೆಯ ಹೊರಗೆ ಕಾಣುವ ಬರವಣಿಗೆಗೂ ಹಾಗೂ ಅವರು ಶಾಲೆಯಲ್ಲಿ ಬರೆಯುವ ಬರವಣಿಗೆಗೂ ಏನಾದರೂ ಹೋಲಿಕೆಗಳಿವೆಯೇ? ಏಕೆ, ಅಥವಾ ಏಕೆ ಇಲ್ಲ?

ಪ್ರಸಂಗ ಅಧ್ಯಯನ - 1ರಲ್ಲಿ ನೀವು ನೈಜ ಪ್ರಪಂಚದ ಬರವಣಿಗೆಯನ್ನು ತಮ್ಮ ತರಗತಿಯಲ್ಲಿ ಬಳಸಿಕೊಂಡ ಒಬ್ಬ ಶಿಕ್ಷಕರ ಕುರಿತು ಓದಲಿದ್ದೀರಿ.

## ಪ್ರಸಂಗ ಅಧ್ಯಯನ 1: ಅಂಚೆಕಾರ್ಡುಗಳ ಬರವಣಿಗೆ

*ಶ್ಯಾಮಲ ಒಂದು ಶಾಲೆಯಲ್ಲಿ ಎರಡನೇ ತರಗತಿ ಶಿಕ್ಷಕಿ. ಇಲ್ಲಿ ಅವರು ತಮ್ಮ ವಿದ್ಯಾರ್ಥಿಗಳೊಂದಿಗೆ ತಾವು ಕೈಗೊಂಡ ಒಂದು ಸರಳ ಬರವಣಿಗೆ ಚಟುವಟಿಕೆಯನ್ನು ವಿವರಿಸಿದ್ದಾರೆ.*

ಬೇಸಿಗೆಗೆ ಮುಂಚೆ, ದೆಹಲಿಗೆ ಪ್ರಯಾಣ ಮಾಡಿದ ನನ್ನ ಗೆಳತಿಯಿಂದ ನನಗೆ ಒಂದು ಅಂಚೆಕಾರ್ಡು ಬಂತು. ಅದನ್ನು ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ತೋರಿಸಿದೆ. ಅದರಲ್ಲಿ ಮುಂದೆ ಇದ್ದ ಕೆಂಪುಕೋಟೆಯ ಚಿತ್ರ ಹಾಗೂ ಹಿಂದೆ ಇದ್ದ ಸಂದೇಶವನ್ನು ನೋಡಿ ವಿದ್ಯಾರ್ಥಿಗಳು ಉತ್ಸುಕರಾದರು.

ಅಂಚೆಕಾರ್ಡ್ ಮೇಲಿನ ವಿದ್ಯಾರ್ಥಿಗಳ ಆಸಕ್ತಿ ಕಂಡು, ಇನ್ನಷ್ಟು ಬೆಳೆಸಲು ಒಂದು ಪಾಠವನ್ನು ಯೋಜಿಸಲು ತೀರ್ಮಾನಿಸಿದೆ. ದಪ್ಪನೆಯ ಬಿಳಿಕಾರ್ಡುಗಳನ್ನು ಆಯಾತಾಕಾರವಾಗಿ ಕತ್ತರಿಸಿ, ಒಂದೊಂದನ್ನು ಅವರಿಗೆ ಕೊಟ್ಟೆ. ನಂತರ ಅದರ ಒಂದು ಬದಿಯಲ್ಲಿ ಅವರಿಗೆ ಇಷ್ಟವಾದ, ಪರಿಚಿತ ಅಥವಾ ಕಲ್ಪನೆಯ ಚಿತ್ರವೊಂದನ್ನು ಬಿಡಿಸಲು ಹೇಳಿದೆ.

ಅವರು ಅದನ್ನು ಪೂರ್ಣಗೊಳಿಸಿದ ಮೇಲೆ, ಕಾರ್ಡಿನ ಹಿಂಬದಿಯಲ್ಲಿ ಗೆರೆ ಎಳೆದು ಎರಡು ಭಾಗಗಳಾಗಿ ಮಾಡುವಂತೆ ಹೇಳಿದೆ. ಅದರ ಬಲಬದಿಯಲ್ಲಿ ಅವರು ತಮ್ಮ ಮನೆಯ ವಿಳಾಸವನ್ನು ಬರೆದರು. ಇದು ಕೆಲವು ವಿದ್ಯಾರ್ಥಿಗಳಿಗೆ ಗೊತ್ತಿರಲಿಲ್ಲ. ಆದ್ದರಿಂದ ಅವರಿಗೆ ಹೇಗೆ ಅದನ್ನು ಬರೆಯಬೇಕೆಂದು ಹೇಳಿಕೊಟ್ಟೆ.

ಆ ವಿಳಾಸದ ಎಡಬದಿಯಲ್ಲಿ, ಅವರು ತಮ್ಮ ಪೋಷಕರಿಗೆ ಚಿಕ್ಕ ಸಂದೇಶವನ್ನು ಬರೆದರು. ಕಪ್ಪುಹಲಗೆಯ ಮೇಲೆ 'ಪ್ರೀತಿಯ ಅಪ್ಪ-ಅಮ್ಮ', 'ನೀವು ಚೆನ್ನಾಗಿದ್ದೀರಿ ಎಂದು ನಂಬಿದ್ದೇನೆ', 'ನನ್ನ ಶುಭಾಶಯಗಳು' ಮುಂತಾಗಿ ಬರೆದೆ. ಈ ರೀತಿಯಾಗಿ, ಕಡಿಮೆ ಸಾಮರ್ಥ್ಯದ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದೆ. ಹೆಚ್ಚು ಸಾಮರ್ಥ್ಯ ವಿದ್ಯಾರ್ಥಿಗಳು ತಮ್ಮ ಆಯ್ಕೆಯ ಸಂದೇಶಗಳನ್ನು ಬರೆದರು. ಸಂದೇಶದ ಕೊನೆಯಲ್ಲಿ ಅವರು ತಮ್ಮ ಹೆಸರನ್ನು ಬರೆದರು.

ನನ್ನ ಮುಖ್ಯಶಿಕ್ಷಕರು ಅಂಚೆಕಾರ್ಡುಗಳಿಗೆ ಬೇಕಾದ ಸ್ಟ್ಯಾಂಪುಗಳನ್ನು ಖರೀದಿಸಲು ಹಣ ಒದಗಿಸಿದರು. ಅಂಚೆಕಾರ್ಡಿನ ಬಲಮೇಲ್ತುದಿಯಲ್ಲಿ ಸ್ಟ್ಯಾಂಪುಗಳನ್ನು ಅಂಟಿಸಿ, ಹತ್ತಿರದ ಪೋಸ್ಟ್ ಬಾಕ್ಸ್ ಬಳಿಗೆ ಕರೆದುಕೊಂಡು ಹೋದಾಗ, ವಿದ್ಯಾರ್ಥಿಗಳು ಕಾರ್ಡುಗಳನ್ನು ಪೋಸ್ಟ್ ಬಾಕ್ಸ್ ಗೆ ಹಾಕಿದರು.

ಅದರ ಮುಂದಿನವಾರ, ಅಂಚೆಕಾರ್ಡುಗಳು ಅವರ ಮನೆಗಳಿಗೆ ತಲುಪಿದಾಗ, ವಿದ್ಯಾರ್ಥಿಗಳು ಪುಳಕಿತರಾಗಿದ್ದರು. ಅವರ ಪೋಷಕರು ಸಹ ಸಂತೋಷದಿಂದ ಸ್ವೀಕರಿಸಿದರು.

### ಚಿಂತನೆಗೊಂದು ಕ್ಷಣ

- ಶ್ಯಾಮಲರವರ ಅಂಚೆಕಾರ್ಡ್ ಚಟುವಟಿಕೆಯು ಹೇಗೆ ರಚನೆ ಮತ್ತು ನಕಲು ಮಾಡುವಿಕೆ ಸಂಬಂಧಿತ ಕಾರ್ಯಗಳನ್ನು ಸಮತೋಲನವಾಗಿಸಿದೆ?
- ಹಿರಿಯ ಪ್ರಾಥಮಿಕ ಹಂತದ ವಿದ್ಯಾರ್ಥಿಗಳಿಗೆ ಈ ಚಟುವಟಿಕೆಯನ್ನು ಹೇಗೆ ಅಳವಡಿಸಿಕೊಳ್ಳುತ್ತೀರಿ?

ಈ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ತಮ್ಮದೇ ವಿಚಾರಗಳನ್ನು ಬಳಸಿಕೊಂಡು ಒಂದು ಬರಹವನ್ನು ರಚಿಸಲು ಅವಕಾಶ ನೀಡಲಾಗಿದೆ. ಆದರೆ ಇದನ್ನು ಮಾಡಲು ಅವರಿಗೆ ಬೇಕಾದ ಕೆಲವು ಪದಗುಚ್ಛಗಳನ್ನು ಶಿಕ್ಷಕರು ನೀಡಿದ್ದಾರೆ. ಈ ರೀತಿಯ ಚಟುವಟಿಕೆಯ ಮೂಲಕ ಪೋಷಕರಿಗೆ ಸಂದೇಶಗಳನ್ನು ಕಳುಹಿಸುವುದರಿಂದ ಮನೆ-ಶಾಲೆಗಳ ನಡುವಿನ ಸಂವಹನ ಧನಾತ್ಮಕ ರೀತಿಯಲ್ಲಿ ಪ್ರೋತ್ಸಾಹಿಸಲ್ಪಡುತ್ತದೆ. ಹಿರಿಯ ಹಂತದ ವಿದ್ಯಾರ್ಥಿಗಳಿಗೆ ಹೆಚ್ಚು ಅವಕಾಶಗಳಿದ್ದು, ಅವರು ಪರಸ್ಪರ ಅಥವಾ ಪರಿಚಿತ ಬೇರೆ ಶಾಲೆಯ ವಿದ್ಯಾರ್ಥಿಗಳಿಗೆ ಅಂಚೆಕಾರ್ಡುಗಳನ್ನು ಬರೆಯಬಹುದು.

## 2 ಒಟ್ಟಾಗಿ ಸೇರಿ ಮಾಡುವ ಬರವಣಿಗೆ (Shared writing)

ಕೆಲವು ಸಂದರ್ಭಗಳಲ್ಲಿ ವಿದ್ಯಾರ್ಥಿಗಳಿಗೆ ಬರವಣಿಗೆ ಕಾರ್ಯವನ್ನು ಹೇಗೆ ಆರಂಭಿಸಬೇಕು ಮತ್ತು ಏನನ್ನು ಸೇರಿಸಬೇಕು ಎನ್ನುವುದು ಕಷ್ಟವಾಗುತ್ತದೆ. ಹಲವರ ವಿಚಾರಗಳನ್ನು ಒಟ್ಟಿಗೆ ಸೇರಿಸುವ ಮೂಲಕ, ಒಟ್ಟಾಗಿ ಸೇರಿ ಮಾಡುವ ಬರವಣಿಗೆಯು ತರಗತಿಯಲ್ಲಿನ ಈ ತೊಂದರೆಯಿಂದ ಹೊರಬರುವ ಒಂದು ಸಹಭಾಗಿತ್ವದ ಧಾನವಾಗಿದೆ.

ನಿರ್ದಿಷ್ಟವಾಗಿ, ಒಟ್ಟಾಗಿ ಸೇರಿ ಮಾಡುವ ಬರವಣಿಗೆಯು ಓದಲು ಕಲಿಯುತ್ತಿರುವ ಕಿರಿಯ ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾದುದು. ಏಕೆಂದರೆ, ಇದು ಆಲೋಚನೆಗಳನ್ನು ಮಾತುಗಳಾಗಿ ಪರಿವರ್ತಿಸುವುದನ್ನು ಹಾಗೂ ಮೌಖಿಕ ಭಾಷೆಯನ್ನು (ಮಾತು) ಹೇಗೆ ಬರವಣಿಗೆಗೆ ಇಳಿಸಬೇಕು ಎನ್ನುವುದನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಆದರೂ, ಇದು ಎಲ್ಲಾ ಹಂತದ ದ್ಯಾರ್ಥಿಗಳಿಗೂ ಉಪಯುಕ್ತವಾದುದು.

ಪ್ರಸಂಗ ಅಧ್ಯಯನ - 2ರಲ್ಲಿ ಈಗ ನೀವು ಎರಡು ಉದಾಹರಣೆಗಳನ್ನು ಓದಿ.

### ಪ್ರಸಂಗ ಅಧ್ಯಯನ 2: ವಿದ್ಯಾರ್ಥಿಗಳ ಮಾತುಗಳನ್ನು ಬರವಣಿಗೆಗೆ ಪರಿವರ್ತಿಸುವುದು

*ಮಂಗಳೂರು ಸಮೀಪದ ಒಂದು ಹಳ್ಳಿಯ ಶಾಲೆಯಲ್ಲಿ ಉಷಾ ಎರಡನೇ ತರಗತಿಯ ಶಿಕ್ಷಕಿಯಾಗಿದ್ದಾರೆ.*

ನಾನು ಮ್ಯಾಗಜಿನ್ ಮತ್ತು ಜಾಹಿರಾತುಗಳಿಂದ ನಿಯಮಿತವಾಗಿ ಚಿತ್ರಗಳನ್ನು ಕತ್ತರಿಸಿ ಇಟ್ಟುಕೊಳ್ಳುತ್ತೇನೆ. ಸ್ಥಳ ಮತ್ತು ಪ್ರಾಣಿಗಳ ಚಿತ್ರಗಳೂ ಸೇರಿರುತ್ತವೆ. ಸಾಧ್ಯವಾದಲ್ಲಿ, ಬಣ್ಣ ಬಣ್ಣದ, ಹಾಸ್ಯಮಯ ಹಾಗೂ ಅಪರೂಪವೆನಿಸುವ ಚಿತ್ರಗಳನ್ನು ಹುಡುಕಲು ಪ್ರಯತ್ನಿಸುತ್ತೇನೆ. ಈಗ ನಾನು ಒಂದು ದೊಡ್ಡ ಚಿತ್ರ ಸಂಗ್ರಹವನ್ನೇ ಹೊಂದಿದ್ದೇನೆ.

ನಾನು ಈ ಬರವಣಿಗೆ ಚಟುವಟಿಕೆಯನ್ನು ಒಮ್ಮೆಗೆ ಒಂದು ಸಣ್ಣಗುಂಪಿನ ವಿದ್ಯಾರ್ಥಿಗಳೊಂದಿಗೆ ಮಾಡುತ್ತೇನೆ. ಆಗ ಅದೇ ಸಮಯದಲ್ಲಿ, ತರಗತಿಯ ಉಳಿದ ವಿದ್ಯಾರ್ಥಿಗಳಿಗೆ ಬೇರೆ ಕಾರ್ಯಕೊಟ್ಟು, ಮಾಡಲು ಹೇಳುತ್ತೇನೆ. ವಿದ್ಯಾರ್ಥಿಗಳ ಗುಂಪಿಗೆ ಒಂದು ಚಿತ್ರವನ್ನು ಕೊಟ್ಟು, ಎಲ್ಲರೂ ಅದರ ಕುರಿತು ಸ್ವಲ್ಪ ಸಮಯ ಚರ್ಚಿಸುವಂತೆ ಹೇಳುವ ಮೂಲಕ ಆರಂಭಿಸುತ್ತೇನೆ. ನಂತರ ಅದೇ ಚಿತ್ರದ ಕುರಿತು ಬೇರೆ ವಿದ್ಯಾರ್ಥಿಗಳಿಗೆ ಅದರ ಕುರಿತು ಏನಾದರೂ ಹೇಳುವಂತೆ ಕೇಳುತ್ತೇನೆ. ಅವರು ಹೇಳುವುದನ್ನು ನಾನು ಕಪ್ಪುಹಲಗೆ ಮೇಲೆ ಬರೆಯುತ್ತೇನೆ.

ಪ್ರತಿಯೊಬ್ಬರೂ ಹೇಳಿದ ಮೇಲೆ, ಕಪ್ಪುಹಲಗೆಯ ಮೇಲಿನ ಪದಗಳನ್ನು ತೋರಿಸುತ್ತಾ, ಅವರು ಹೇಳಿರುವುದನ್ನು ಓದುತ್ತೇನೆ. ನಂತರ ನಾವು ವಾಕ್ಯಗಳನ್ನು ಗಮನಿಸಿ. ಒಂದು ಸಮಂಜಸವಾದ ಕಥೆಯನ್ನು ಮಾಡಲು ಅವುಗಳನ್ನು ಪುನರ್ ಜೋಡಿಸುತ್ತೇನೆ. ಆಸಕ್ತಿದಾಯಕವಾಗಿ ಮಾಡಲು, ಅದರ ಹರಿವು ಇರುವಂತೆ ನೋಡಿಕೊಳ್ಳಲು ಕೆಲವು ಪದ/ಪದಗುಚ್ಛಗಳನ್ನು ಸೇರಿಸುತ್ತಾ ಎಲರೂ ಕಥೆಯನ್ನು ಗಟ್ಟಿಯಾಗಿ ಓದುತ್ತೇವೆ. ಎಲ್ಲರಿಗೂ ಕಥೆ ಚೆನ್ನಾಗಿದೆ ಎಂದು ಎನಿಸಿದಾಗ, ನಾವು ಒಂದು ಸೂಕ್ತ ಶೀರ್ಷಿಕೆಯನ್ನು ಕೊಡುತ್ತೇವೆ.



**ಚಿತ್ರ 2** ಒಂದು ಗುಂಪು ಕಥೆ ಬರೆಯಲು ನಿರತರಾಗಿರುವುದು

ಆ ನಂತರ, ನಾನು ಆ ಕಥೆಯನ್ನು ಒಂದು ಚಾರ್ಟ್ ಪೇಪರ್ ನ ಮೇಲೆ ಬರೆದು, ಅದರ ಕೆಳಗೆ ಆಯಾ ಗುಂಪಿನ ಸದಸ್ಯರ ಹೆಸರುಗಳನ್ನು ಬರೆದು, ತರಗತಿಯ ಗೋಡೆಗೆ ನೇತುಹಾಕುತ್ತೇನೆ.

ವಿದ್ಯಾರ್ಥಿಗಳಿಗೆ ತಮ್ಮ ಪುಸ್ತಕಗಳಲ್ಲಿ ಕಥೆಯನ್ನು ಅಚ್ಚುಕಟ್ಟಾಗಿ ನಕಲು ಮಾಡಿಕೊಳ್ಳುವಂತೆ (copy) ಹಾಗೂ ಸೂಕ್ತ ಚಿತ್ರಗಳನ್ನು ಬಿಡಿಸುವಂತೆ ಹೇಳುತ್ತೇನೆ.

*ಮೈಸೂರಿನ ಒಂದು ದೊಡ್ಡಶಾಲೆಯಲ್ಲಿ ಮಹದೇವ್ ಎಂಟನೇ ತರಗತಿಯ ಶಿಕ್ಷಕರಾಗಿದ್ದಾರೆ.*

ಸ್ಥಳೀಯ ಮಾರುಕಟ್ಟೆಯನ್ನು ದೂರದ ಮತ್ತೊಂದು ಜಾಗಕ್ಕೆ ಸ್ಥಳಾಂತರಿಸುವ ಸರ್ಕಾರದ ಯೋಜನೆಯ ಕುರಿತು ನನ್ನ ವಿದ್ಯಾರ್ಥಿಗಳು ತುಂಬಾ ಬೇಸರಗೊಂಡಿದ್ದರು. ಅಲ್ಲಿ ಖರೀದಿಸುವ ಮತ್ತು ಮಾರುವ ಸಮುದಾಯದ ಹಲವು ಕುಟುಂಬಗಳಿಗೆ ಇದು ಅನಾನುಕೂಲವಾಗಿತ್ತು.

ನನ್ನ ವಿದ್ಯಾರ್ಥಿಗಳು ಮಾನ್ಯ ಮಹಾಪೌರರಿಗೆ (ಮೇಯರ್) ಒಂದು ಪ್ರತಿಭಟನ್ ಪತ್ರವನ್ನು ಬರೆಯಬೇಕೆಂದುಕೊಂಡಿದ್ದರು. ಇದಕ್ಕಾಗಿ ನಾನು ಸಹಾಯ ಮಾಡಲು ಒಪ್ಪಿದೆ. ಪ್ರತಿ ಆರು ವಿದ್ಯಾರ್ಥಿಗಳ ಗುಂಪಿಗೆ ಕಾಗದವನ್ನು ಕೊಟ್ಟು, ತಾವು ಹೇಳಬೇಕಾದ ಮುಖ್ಯಾಂಶಗಳನ್ನು ಬರೆಯುವಂತೆ ಹೇಳಿದೆ.



**ಚಿತ್ರ 3** ಪತ್ರವನ್ನು ಬರೆಯುತ್ತಿರುವುದು

ಅವರೆಲ್ಲರೂ ಬರೆದ ಮೇಲೆ, ಪ್ರತಿ ಗುಂಪು ಇಡೀ ತರಗತಿಗೆ ಓದಿ ಹೇಳುವಂತೆ ಹೇಳಿದೆ. ಅವರು ಹೇಳುತ್ತಾ ಹೋದಂತೆ, ನಾನು ಅವರ ವಿಚಾರಗಳನ್ನು ಕಪ್ಪುಹಲಗೆಯ ಮೇಲೆ ಬರೆದುಕೊಂಡೆ. ಕೆಲವೊಮ್ಮೆ ಅವರ ಭಾಷೆ ತುಂಬಾ ಕೋಪದಿಂದ ಕೂಡಿತ್ತು, ಗೌರವಯುತವಾಗಿ ಅವರ ವಿಚಾರಗಳನ್ನು ಮಂಡಿಸುವುದರಿಂದ, ಅವುಗಳಿಗೆ ಸೂಕ್ತ ಕಾರಣಗಳನ್ನು ಒದಗಿಸುವುದರಿಂದ ಮಹಾಪೌರರು ಗಮನಕೊಡುವಂತೆ ಮಾಡಬಹುದು ಎಂಬುದರ ಮಹತ್ವವನ್ನು ಮನಗಾಣಿಸಿದೆ. ಒಟ್ಟಾಗಿ, ಮುಖ್ಯಾಂಶಗಳನ್ನು ಕಪ್ಪು ಹಲಗೆಯ ಮೇಲೆ ಬರೆದು, ನಂತರ ಔಪಚಾರಿಕ ಭಾಷೆ ಬಳಸಿ ಪತ್ರದ ಅನೇಕ ಕರಡುಗಳನ್ನು ತಯಾರಿಸಿದೆವು.

ನಂತರ ಪ್ರತಿಯೊಬ್ಬರೂ ಪತ್ರದ ಪ್ರತಿಯನ್ನು ಪಡೆಯಲು, ಪತ್ರದ ಅಂತಿಮ ಪ್ರತಿಯನ್ನು ಬರೆದುಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಹೇಳಿದೆ. ಬಳಿಕ, ಅವರು ಇದರಲ್ಲಿ ಒಂದನ್ನು ಆಯ್ಕೆಮಾಡಿಕೊಂಡು ನಕಲು ಮಾಡಿ ತಮ್ಮ ಸಹಿಗಳನ್ನು ಮಾಡಿ, ಮಹಾಪೌರರಿಗೆ ಅಂಚೆ ಮೂಲಕ ಕಳುಹಿಸಿದರು.

ಮಾರುಕಟ್ಟೆಯನ್ನು ಸ್ಥಳಾಂತರ ಮಾಡುವುದರ ವಿರುದ್ಧ ಸ್ಥಳೀಯರಲ್ಲಿರುವ ಆಕ್ರೋಶವನ್ನು ಮಹಾಪೌರರಿಗೆ ಮುಟ್ಟಿಸಲು ಒಂದು ಬೇಡಿಕೆ ಅರ್ಜಿಯನ್ನು (Petition) ಬರೆಯುವ ವಿಚಾರ ಕೂಡ ನನ್ನ ವಿದ್ಯಾರ್ಥಿಗಳಲ್ಲಿತ್ತು. ಆದ್ದರಿಂದ ನಾವು ಬೇಡಿಕೆ ಅರ್ಜಿಯ ಪ್ರಸ್ತಾವನೆಯ ಭಾಗವಾಗಿ, ಸ್ಥಳಾಂತರ ಮಾಡುವುದರ ವಿರುದ್ಧ ಪ್ರತಿಭಟನಾ ಬರಹವನ್ನು ಬರೆಯಲು ಇದೇ ಒಟ್ಟಾಗಿ ಸೇರಿ ಮಾಡುವ ಬರವಣಿಗೆ ಪ್ರಕ್ರಿಯೆಯನ್ನೇ ಅನುಸರಿಸಿದೆವು. ನಂತರ ವಿದ್ಯಾರ್ಥಿಗಳು ಸಮುದಾಯದ ಸದಸ್ಯರನ್ನು ಭೇಟಿಯಾಗಿ ಸಹಿಮಾಡಿಸಲು ಅನುಕೂಲವಾಗುವ ಅನೇಕ ದಿನಗಳವರೆಗಿನ 'ವಿದ್ಯಾರ್ಥಿಗಳ ಜವಾಬ್ದಾರಿ ಪಟ್ಟಿ'ಯನ್ನು ಸಿದ್ಧಪಡಿಸಿದರು.

### ಚಿಂತನೆಗೊಂದು ಕ್ಷಣ

ಮೇಲಿನ ಎರಡು ಪ್ರಸಂಗ ಅಧ್ಯಯನಗಳಿಗೂ ಈ ಕೆಳಗಿನ ಪ್ರಶ್ನೆಗಳನ್ನು ಪರಿಗಣಿಸಿ:

- ಆ ವಿದ್ಯಾರ್ಥಿಗಳ ಬರವಣಿಗೆಯ ಓದುಗ ಯಾರು ಮತ್ತು ಉದ್ದೇಶ ಏನು?
- ರಚನೆ ಮತ್ತು ನಕಲು ಮಾಡುವಿಕೆ ಸಂಬಂಧಿತ ಕಾರ್ಯಗಳು ಹೇಗೆ ಸಮತೋಲಿತವಾಗಿವೆ?
- ವಿದ್ಯಾರ್ಥಿಗಳು ಚಟುವಟಿಕೆಯಲ್ಲಿರುವಾಗ ಶಿಕ್ಷಕರು ಅವರನ್ನು ಮೌಲ್ಯಾಂಕನ ಮಾಡಲು ಇರುವ ಅವಕಾಶಗಳು ಯಾವುವು?
- ಪ್ರತಿ ಪ್ರಸಂಗದಲ್ಲಿ, ವಿದ್ಯಾರ್ಥಿಗಳು ಹೇಗೆ ಸಹಭಾಗಿತ್ವದಲ್ಲಿ ಹಾಗೂ ವೈಯಕ್ತಿಕವಾಗಿ ಬರೆದರು ಎಂಬುದನ್ನು ಗಮನಿಸಿ. ಒಟ್ಟಾಗಿ ಸೇರಿ ಮಾಡುವ ಬರವಣಿಗೆಯ ಸಾಮಾಜಿಕ ಲಾಭಗಳು ಯಾವುವು ಎಂದು ನಿಮಗನ್ನಿಸುತ್ತಿದೆ?

ಈ ಹಂತದಲ್ಲಿ ಪ್ರಮುಖ ಸಂಪನ್ಮೂಲ 'ಗುಂಪು ಕೆಲಸದ ಬಳಕೆ' ಉಪಯುಕ್ತವಾಗಬಹುದು.

**Video: Using groupwork**

## ಚಟುವಟಿಕೆ 2: ಬರವಣಿಗೆ - ಕೇಂದ್ರಿತ ಪಾಠದ ಯೋಜನೆ

ಪ್ರಸಂಗ ಅಧ್ಯಯನ - 2ರಲ್ಲಿನ ತರಗತಿ ಅಭ್ಯಾಸದ ದಾಖಲೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು, ಅವರು ವಿವರಿಸುವ ಪಾಲುದಾರಿಕೆಯ ಬರವಣಿಗೆ ಚಟುವಟಿಕೆಗೆ ಪಾಠಯೋಜನೆಯನ್ನು ಬರೆಯಿರಿ.

ನಿಮಗೆ ಸಾಧ್ಯವಾದಷ್ಟು ವಿವರಗಳನ್ನು ಸೇರಿಸಲು ಪ್ರಯತ್ನಿಸಿ. ಚಟುವಟಿಕೆಯ ಪ್ರತಿ ಹಂತಕ್ಕೂ ಬೇಕಾಗುವ ಸಂಪನ್ಮೂಲಗಳನ್ನು ಗುರುತಿಸಲು ಹಾಗೂ ಬೇಕಾಗುವ ಸಮಯವನ್ನು ಅಂದಾಜಿಸುವ ಮೂಲಕ ಆರಂಭಿಸಿ. ಹಂತಗಳನ್ನು ನೀವು ಅನೇಕ ಪಾಠಗಳಾಗಿ ಬಯಸಿದಲ್ಲಿ ವಿಸ್ತರಿಸಿಕೊಳ್ಳಬಹುದು.

ಪಾಠಯೋಜನೆಯ ಕುರಿತ ಹೆಚ್ಚಿನ ಮಾರ್ಗದರ್ಶನಕ್ಕಾಗಿ ಸಂಪನ್ಮೂಲ - 1 ಗಮನಿಸಿ.

ಉಷಾರವರ ದಾಖಲೆಯ ಆಧಾರದ ಮೇಲೆ ಅವರ ಯೋಜನೆಯ ಉದಾಹರಣೆಯೊಂದರ ಆರಂಭ ಇಲ್ಲಿದೆ. ಕೋಷ್ಟಕ (table) ಮಾದರಿಯಲ್ಲೂ ನೀವು ಬರೆಯಬಹುದು.

ಪಾಠಯೋಜನೆ: ಉಷಾರವರ ಪಾಲುದಾರಿಕೆಯ ಬರವಣಿಗೆ ಚಟುವಟಿಕೆ

ಉದ್ದೇಶಗಳು:

- ಆಲೋಚನೆಗಳು, ಮಾತುಗಳು ಮತ್ತು ಬರವಣಿಗೆಗಳಿಗೆ ಸಂಪರ್ಕ ಕಲ್ಪಿಸಲು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವುದು
- ಚಿತ್ರಗಳನ್ನು ಸುಳಿವುಗಳಾಗಿ ಬಳಸಿ ಜೋಡಿ ಚರ್ಚೆಗಳನ್ನು ಪ್ರೋತ್ಸಾಹಿಸುವುದು
- ತರಗತಿಯು ಒಟ್ಟಾಗಿ ಕಥೆ ಸೃಷ್ಟಿಸುವುದಕ್ಕೆ ನೆರವಾಗುವಂತೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವುದು

  ಸಂಪನ್ಮೂಲಗಳು:

- ಮ್ಯಾಗಜಿನ್ ಚಿತ್ರಗಳು ಅಥವಾ ಕತ್ತರಿಸಿದ ಚಿತ್ರಗಳು ಅಥವಾ ಝೆರಾಕ್ಸ್ ಪ್ರತಿಗಳು, ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ಕಾಣುವಂತೆ ಸಾಕಷ್ಟು ದೊಡ್ಡದಾಗಿರಬೇಕು

ಸಮಯ:

- ಚಿತ್ರಗಳನ್ನು ಪರಿಚಯಿಸಲು ಹತ್ತು ನಿಮಿಷಗಳು
- ಚಿತ್ರಗಳ ಬಗ್ಗೆ ಜೋಡಿಯಲ್ಲಿ ಮಾತನಾಡಲು ಐದು ನಿಮಿಷಗಳು
- ಚಿತ್ರಗಳ ಕುರಿತು ಇಡೀ ತರಗತಿಯ ಮಾತಿಗೆ ಇಪ್ಪತ್ತೈದು ನಿಮಿಷಗಳು

ಪೂರ್ಣ ಮಾಡಿದ ನಿಮ್ಮ ಯೋಜನೆಯನ್ನು ಇಟ್ಟುಕೊಳ್ಳಿ. ಮುಂದಿನ ಚಟುವಟಿಕೆ 3 ಮತ್ತು 4ಕ್ಕೆ ಅದನ್ನು ಮಾದರಿಯಾಗಿ ಬಳಸಿಕೊಳ್ಳಬಹುದು.



**Video: Planning lessons**

## ಚಟುವಟಿಕೆ 3: ವಿಶ್ವಾಸಾರ್ಹ (authentic) ಓದುಗರು ಮತ್ತು ಉದ್ದೇಶಗಳಿಗಾಗಿ ಬರವಣಿಗೆ

ವಿಶ್ವಾಸಾರ್ಹ (authentic) ಓದುಗರು ಮತ್ತು ಉದ್ದೇಶಗಳಿಗಾಗಿ ನಿಮ್ಮ ವಿದ್ಯಾರ್ಥಿಗಳು ಬರೆಯುವಂತಹ ಸಾಧ್ಯವಾದಷ್ಟು ಅವಕಾಶಗಳನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಸೇರಿ ಆಲೋಚಿಸಿ.

ಇಲ್ಲಿ ಕೆಲವು ಸಾಧ್ಯತೆಗಳಿವೆ. ನಿಮ್ಮ ನಿರ್ದಿಷ್ಟ ಸನ್ನಿವೇಶ, ವಿದ್ಯಾರ್ಥಿಗಳ ವಯಸ್ಸು, ಅನುಭವಗಳಿಗೆ ಸೂಕ್ತವಾದ ಇತರ ಸಾಧ್ಯತೆಗಳನ್ನು ನೀವು ಸೇರಿಸಬಹುದು.

ನಿಮ್ಮ ವಿದ್ಯಾರ್ಥಿಗಳು:

- ಅವರ ಕುಟುಂಬಗಳಿಗೆ ಹಬ್ಬ ಅಥವಾ ಜನ್ಮದಿನದ ಕಾರ್ಡುಗಳನ್ನು ಬರೆದು, ಚಿತ್ರಿಸಬಹುದು
- ಹಳ್ಳಿಯಲ್ಲಿನ ಪುಟ್ಟ ಮಕ್ಕಳಿಗಾಗಿ ಸರಳ ಪುಸ್ತಕಗಳನ್ನು ಮಾಡಬಹುದು
- ಶಾಲೆಯಲ್ಲಿನ ಕಿರಿಯ ಮಕ್ಕಳಿಗಾಗಿ ಕಥೆ ಅಥವಾ ಕವಿತೆಗಳನ್ನು ಬರೆಯಬಹುದು
- DIETಗಳ ಮೂಲಕ ಬೇರೆ ಜಿಲ್ಲೆ/ ನಗರದ ಇನ್ನೊಂದು ತರಗತಿಯೊಂದಿಗೆ ಬರವಣಿಗೆ ಸ್ನೇಹಿತರಾಗಬಹುದು
- ಲೇಖಕ, ನೃತ್ಯಪಟು ಅಥವಾ ರಾಜಕೀಯ ವ್ಯಕ್ತಿಗೆ ಅವರ ಕಾರ್ಯದ ಕುರಿತು ಪ್ರಶ್ನೆ ಕೇಳಿ ಪತ್ರ ಬರೆಯಬಹುದು
- ಆರೋಗ್ಯ ಸಂಬಂಧಿ ವಿಷಯಗಳ ಕುರಿತು ಭಿತ್ತಿಪತ್ರ (Poster)ಗಳನ್ನು ಮಾಡಿ. ಶಾಲೆಯ ಸುತ್ತಮುತ್ತ ಅಥವಾ ಹೊರಗೆ ಹಾಕಬಹುದು. ಉದಾ: ಶುಚಿತ್ವ
- ಮನೆಯಲ್ಲಿನ ತಿನಿಸುಗಳನ್ನು ಬರೆದು, ತರಗತಿಯ ಪಾಕಪುಸ್ತಕ (cookbook) ಮಾಡಿ ಹಂಚಬಹುದು
- ಸ್ಥಳೀಯ ಕಾಳಜಿಯ ಕುರಿತು ಅಭಿಪ್ರಾಯಗಳನ್ನು ಸ್ಥಳೀಯ ಪತ್ರಿಕೆಗಳಿಗೆ ಬರೆಯಬಹುದು
- ಹೊಸ ವಿದ್ಯಾರ್ಥಿಗಳಿಗೆ ಸಲಹಾ ರೂಪದಲ್ಲಿ 'ಸ್ವಾಗತ ಮಾರ್ಗದರ್ಶಿ' ಪುಸ್ತಕವನ್ನುತಯಾರಿಸಬಹುದು
- ತಮ್ಮ ಹಳ್ಳಿ ಅಥವಾ ಜಿಲ್ಲೆಗೆ ಮಾರ್ಗದರ್ಶಿಯನ್ನು ತಯಾರಿಸಬಹುದು

ನೀವು ಪಟ್ಟಿ ಮಾಡುವ ಎಲ್ಲಾ ಸಲಹೆಗಳಿಗೆ ಈ ಟಿಪ್ಪಣಿಗಳನ್ನು ಮಾಡಿ:

- ಬರವಣಿಗೆಯ ಉದ್ದೇಶಿತ ಓದುಗ ಯಾರು (ಪೋಷಕರು, ಇತರ ದ್ಯಾರ್ಥಿಗಳು, ಸ್ಥಳೀಯ ಜನರು, ಸಂದರ್ಶಕರು ಮುಂತಾದವರು)
- ಬರವಣಿಗೆಯ ಉದ್ದೇಶ ಏನು (ಮಾಹಿತಿ, ಮನರಂಜನೆ, ಬೋಧನೆ, ಮನವೊಲಿಸುವಿಕೆ ಇತ್ಯಾದಿ)
- ಬರೆಯಬೇಕಾದ ಬರವಣಿಗೆಯನ್ನು ನೀವು ಹೇಗೆ ಮಾದರಿಗಳನ್ನು ತೋರಿಸುವಿರಿ (ನೈಜ ಉದಾಹರಣೆ ತೋರಿಸುವುದು, ಸಾಮಾನ್ಯ ಚೌಕಟ್ಟು ನೀಡುವುದು, ಸೇರಿಸಬೇಕಾದ ಪ್ರಮುಖ ಪದ/ಪದಗುಚ್ಛಗಳ ಪಟ್ಟಿ ಮಾಡುವುದು ಇತ್ಯಾದಿ)
- ಬರವಣಿಗೆ ಚಟುವಟಿಕೆಯಲ್ಲಿ ರಚನೆ ಮತ್ತು ನಕಲು ಮಾಡುವಿಕೆ ಕಾರ್ಯಗಳನ್ನು ಹೇಗೆ ಸಮತೋಲನಗೊಳಿಸುವಿರಿ

## ಚಟುವಟಿಕೆ 4: ನಿಮ್ಮ ವಿದ್ಯಾರ್ಥಿಗಳಿಗೆ ಪಾಲುದಾರಿಕೆ ಬರವಣಿಗೆ ಪಾಠವನ್ನು ಅನುಷ್ಠಾನಗೊಳಿಸುವಿಕೆ

ನಿಮ್ಮ ಪಟ್ಟಿಯಲ್ಲಿನ ಒಂದು ವಿಚಾರವನ್ನು ಆಯ್ಕೆ ಮಾಡಿಕೊಂಡು, ತರಗತಿಯಲ್ಲಿ ಪ್ರಯತ್ನಿಸಲು ತಯಾರಾಗಿ. ನೀವು ಈ ಹಿಂದೆ ತಯಾರಿಸಿದ ಪಾಠಯೋಜನೆಯನ್ನು ಮಾರ್ಗದರ್ಶಿಯಾಗಿ ಉಪಯೋಗಿಸಿಕೊಂಡು, ಈ ಕೆಳಗಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಈ ಪಾಠಕ್ಕಾಗಿ ಒಂದು ಹೊಸ ಯೋಜನೆ ತಯಾರಿಸಿ:

- ಓದುಗ ಮತ್ತು ಕಾರ್ಯದ ಉದ್ದೇಶ
- ಪಾಲುದಾರಿಕೆ ಬರವಣಿಗೆ ಅಂಶದ ಸ್ವರೂಪ
- ರಚನೆ ಮತ್ತು ನಕಲು ಮಾಡುವಿಕೆಗೆ ಸಮಯದ ಸಮತೋಲಿತ ಬಳಕೆ

ಮೊದಲಿಗೆ ನಿಮ್ಮ ಸಹೋದ್ಯೋಗಿಗಳೊಂದಿಗೆ ಇದನ್ನು ಪ್ರಯತ್ನಿಸುವುದು ನಿಮಗೆ ಸಹಾಯಕವಾಗಬಹುದು. ಅವರ ಹಿಮ್ಮಾಹಿತಿಯನ್ನು ಸ್ವೀಕರಿಸಿ, ಅದಕ್ಕನುಗುಣವಾಗಿ ನಿಮ್ಮ ಪಾಠಯೋಜನೆಯನ್ನು ಹೊಂದಿಸಿಕೊಳ್ಳಿ. ನೀವು ಸಿದ್ಧಗೊಂಡ ಮೇಲೆ, ಪಾಠವನ್ನು ನಿಮ್ಮ

ತರಗತಿಯಲ್ಲಿ ಜಾರಿಗೊಳಿಸಿ.

ಬರವಣಿಗೆ ಪ್ರಕ್ರಿಯೆಯ ಧ ಅಂಕಗಳ ಕುರಿತು ವಿದ್ಯಾರ್ಥಿಗಳ ಗಮನ ಸೆಳೆಯುವುದಕ್ಕಾಗಿ, ಅವರು ಸೂಚಿಸಿದ ಸುದಾರಣೆಗೆ ಅನುಗುಣವಾಗಿ ಪಾಲುದಾರಿಕೆ ಬರಹದಲ್ಲಿ ನೀವು ಬದಲಾಯಿಸಬಯಸುವ ಅಂಶಗಳ ಕುರಿತು ವೀಕ್ಷಕ ವಿವರಣೆಯನ್ನು ಒದಗಿಸಿ. ಇವು ಬರವಣಿಗೆ ಶೈಲಿಯ ಬಗ್ಗೆ ಆಗಿರಬಹುದು. ಉದಾಹರಣೆಗೆ - ಔಪಚಾರಿಕ, ಅನೌಪಚಾರಿಕ, ಪದಬಳಕೆ ಅಥವಾ ಅನುಕ್ರಮಗೊಳಿಸುವಿಕೆ ಮತ್ತು ಹರಿವು. ಮಾರ್ಪಡಿಸುತ್ತಿರುವುದು ಹೇಗಿದೆ ಎಂಬುದನ್ನು ಪರಿಶೀಲಿಸುವಾಗ, ನೀವು ಬರೆದಿರುವುದನ್ನು ಗಟ್ಟಿ ವಾಚನ ಮಾಡಿ. ಈ ರೀತಿ ಮಾಡುವ ಮೂಲಕ ಉತ್ತಮ ರಚನೆಗೆ ಚಿಂತನೆ ಮತ್ತು ಅವಧಾನ ಬೇಕೆಂಬುದನ್ನು ತರಗತಿಗೆ ತೋರಿಸಿಕೊಡುತ್ತೀರಿ.

ಅದೇ ಸಮಯದಲ್ಲಿ ನಕಲು ಮಾಡುವಿಕೆ ಕೌಶಲಗಳಾದ ಅಚ್ಚುಕಟ್ಟಾದ ಬರವಣಿಗೆ, ಸಮನಾದ ಅಂತರ ನೀಡುವಿಕೆ, ಸೂಕ್ತ ಲೇಖನ ಚಿಹ್ನೆ ಬಳಕೆ, ಅಕ್ಷರ ಮತ್ತು ವ್ಯಾಕರಣ - ಮುಂತಾದವುಗಳನ್ನು ತೋರಿಸಿಕೊಡಬೇಕು. ಈ ರೀತಿಯ ವಿವರಗಳು ಬರಹದ ಒಟ್ಟಾರೆ ಪರಿಣಾಮಕ್ಕೆ ಹೇಗೆ ಕೊಡುಗೆಯಾಗಬಲ್ಲದು ಎಂಬುದನ್ನು ವಿವರಿಸಿ.

### ಚಿಂತನೆಗೊಂದು ಕ್ಷಣ

- ಪಾಠ ಎಷ್ಟು ಯಶಸ್ವಿಯಾಯಿತು? ಹೇಗೆ ಹೇಳುತ್ತೀರಿ?
- ಎಲ್ಲಾ ವಿದ್ಯಾರ್ಥಿಗಳು ಕಲಿಯುತ್ತಿದ್ದರು ಎಂಬುದನ್ನು ಹೇಗೆ ನೀವು ಪರಿವೀಕ್ಷಣೆ ಮಾಡಿದಿರಿ?

ಪಾಲುದಾರಿಕೆ ಬರವಣಿಗೆಯು ಸ್ನೇಹಪರ ಮತ್ತು ಸಹಯೋಗದಿಂದ ಕೂಡಿದೆ. ಏನನ್ನು ಬರೆಯಬೇಕೆಂಬುದು ತಿಳಿಯದ ಹಾಗೂ ಬರೆಯುವಾಗ ನಕಲು ಮಾಡುವಿಕೆ ತಪ್ಪುಗಳಾಗುತ್ತವೆಂದು ಭಯ ಪಡುವ ವಿದ್ಯಾರ್ಥಿಗಳಿಗೆ ಇದು ಸಹಾಯ ಒದಗಿಸುತ್ತದೆ. ಇದು ವಿದ್ಯಾರ್ಥಿಗಳಿಗೆ ಕರಡು ರಚನೆ ಮತ್ತು ಪುನರ್ ರಚಿಸುವಿಕೆ ಪ್ರಕ್ರಿಯೆಗಳನ್ನು ತೋರಿಸಿಕೊಡುತ್ತದೆ.

## 3 ಸಾರಾಂಶ

ಈ ಘಟಕದಲ್ಲಿ, ನೀವು ತರಗತಿಯಲ್ಲಿ ಬರವಣಿಗೆಯನ್ನು ವಿಶ್ವಾಸಾರ್ಹ (authentic) ಓದುಗರು ಮತ್ತು ಉದ್ದೇಶಗಳಿಗಾಗಿ ಬಳಸುವ ವಿಧಾನಗಳನ್ನು ತಿಳಿದುಕೊಂಡಿದ್ದೀರಿ. ಆತ್ಮವಿಶ್ವಾಸವುಳ್ಳ ಬರಹಗಾರರಾಗಲು ವಿದ್ಯಾರ್ಥಿಗಳಿಗೆ ಅಭ್ಯಾಸಬೇಕು. ಬರವಣಿಗೆಯು ಉದ್ದೇಶ ಪೂರ್ವಕ ಮತ್ತು ಉಪಯುಕ್ತ ಎಂದು ತೋರಿಸಿಕೊಡುವ ಮೂಲಕ ನೀವು ನಿಮ್ಮ ವಿದ್ಯಾರ್ಥಿಗಳಲ್ಲಿ ಬರವಣಿಗೆ ಕೌಶಲಗಳನ್ನು ಬೆಳೆಸಲು ಸಹಾಯ ಮಾಡಬಹುದು. ಇದನ್ನು ನೀವು ಸಂವಹನವನ್ನು ಉತ್ತಮಪಡಿಸುವ ಕ್ರಮವಾಗಿ ರಚನೆ ಮತ್ತು ನಕಲು ಮಾಡುವಿಕೆಯನ್ನು ಬಳಸುವ ಮೂಲಕ ಮಾಡಬಹುದು. ಪಾಲುದಾರಿಕೆ ಬರವಣಿಗೆಯಲ್ಲಿ ಜೊತೆಯಾಗಿ ಕಾರ್ಯನಿರ್ವಹಿಸುವ ಮೂಲಕ ವಿದ್ಯಾರ್ಥಿಗಳು ಬರವಣಿಗೆಯ ವಿಶ್ವಾಸಾರ್ಹ ಉದ್ದೇಶಗಳನ್ನು ತಿಳಿದುಕೊಳ್ಳುತ್ತಾರೆ.

ಈ ಘಟಕವು ನೀವು ಬರವಣಿಗೆ ಕೇಂದ್ರಿತ ಪಾಠವನ್ನು ಯೋಜಿಸಲು ಅವಕಾಶ ಒದಗಿಸುತ್ತದೆ. ಈ ರೀತಿಯ ಯೋಜನೆಗಳು ಒಂದು ಕಲಿಕಾಂಶವನ್ನು ಸಾಧಿಸುವುದಕ್ಕಾಗಿ ನಿಮ್ಮ ಬೋಧನೆಯನ್ನು ಕೇಂದ್ರೀಕರಿಸಲು ಸಹಾಯ ಮಾಡುತ್ತವೆ. ಅಲ್ಲದೆ ಇವುಗಳನ್ನು ಅನೇಕ ಪಾಠಗಳಲ್ಲಿ ಬಳಸಿಕೊಳ್ಳಬಹುದು.

# ಸಂಪನ್ಮೂಲಗಳು

## ಸಂಪನ್ಮೂಲ 1: ಪಾಠಗಳನ್ನು ಯೋಜಿಸುವುದು

### ಯೋಜನೆ ಮತ್ತು ತಯಾರಿಯ ಮಹತ್ವವೇನು?

ಪಾಠಗಳನ್ನು ಉತ್ತಮವಾಗಿ ಯೋಜಿಸಬೇಕು. ಯೋಜನೆಯು ನಿಮ್ಮ ಪಾಠಗಳನ್ನು ಸ್ಪಷ್ಟವಾಗಿ ಹಾಗೂ ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸಹಾಯ ಮಾಡುತ್ತದೆ. ಅದರರ್ಥ, ವಿದ್ಯಾರ್ಥಿಗಳು ಆಸಕ್ತಿ ಮತ್ತು ಕ್ರಿಯಾಶೀಲರಾಗಿರುತ್ತಾರೆ. ಪರಿಣಾಮಕಾರಿ ಯೋಜನೆಯು ತನ್ನಲ್ಲಿಯೇ ಕೆಲವು ನಮ್ಯತೆ (flexibility}ಯನ್ನು ಹೊಂದಿರುವುದರಿಂದ, ಶಿಕ್ಷಕರು ಬೋಧನೆಯನ್ನು ಮಾಡುವಾಗ ಅವರ ವಿದ್ಯಾರ್ಥಿಗಳ ಕಲಿಕೆಯ ಕುರಿತು ಕಂಡುಕೊಂಡ ಅಂಶಗಳಿಗೆ ಅವರು ಪ್ರತಿಕ್ರಿಯೆ ನೀಡುವರು. ಪಾಠಗಳ ಸರಣಿಗೆ ಯೋಜನೆ ತಯಾರಿಸುವುದರಿಂದ, ವಿದ್ಯಾರ್ಥಿಗಳನ್ನು ಹಾಗೂ ಅವರ ಹಿಂದಿನ ಕಲಿಕೆಯನ್ನು ತಿಳಿದುಕೊಳ್ಳುವುದು; ಪಠ್ಯಕ್ರಮದ ಮೂಲಕ ಪ್ರಗತಿ ಸಾಧಿಸುವುದೆಂದರೇನು ಹಾಗೂ ವಿದ್ಯಾರ್ಥಿಗಳ ಕಲಿಕೆಗೆ

ಸಹಾಯಕವಾಗುವಂತಹ ಚಟುವಟಿಕೆಗಳನ್ನು ಮತ್ತು ಅತ್ಯುತ್ತಮ ಸಂಪನ್ಮೂಲಗಳನ್ನು ಕಂಡುಕೊಳ್ಳುವುದು, ಒಟ್ಟಾರೆ ಯೋಜನೆಯ ಭಾಗವಾಗಿರುತ್ತದೆ.

ಒಂದು ಪಾಠವಾಗಲೀ ಅಥವಾ ಪಾಠಗಳ ಸರಣಿಗಳ ಯೋಜನೆಯಾಗಲೀ, ಒಂದು ಇನ್ನೊಂದರ ಆಧಾರದ ಮೇಲೆ ತಯಾರಾಗುವ ನಿರಂತರ ಪ್ರಕ್ರಿಯೆ.  ಅರ್ಥಾತ್, ಪ್ರತಿಯೊಂದು ಹಿಂದಿನ ಪಾಠವನ್ನು ಆಧರಿಸಿ ಬೆಳವಣಿಗೆ ಹೊಂದುತ್ತದೆ. ಪಾಠಯೋಜನೆಯನ್ನು ತಯಾರಿಸುವ ಹಂತಗಳು:-

- ಪ್ರಗತಿಯನ್ನು ಸಾಧಿಸಲು ನಿಮ್ಮ ವಿದ್ಯಾರ್ಥಿಗಳ ಅವಶ್ಯಕತೆಗಳೇನು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಿ.
- ನಿಮ್ಮ ವಿದ್ಯಾರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ ನೀವು ಹೇಗೆ ಬೋಧನೆ ಮಾಡಬೇಕು ಎಂಬುದನ್ನು ಹಾಗೂ ನೀವು ಕಂಡುಕೊಳ್ಳುವ ಅಂಶಗಳಿಗೆ ಹೇಗೆ ನಮ್ಯತೆಯಿಂದ ಪ್ರತಿಕ್ರಿಯಿಸಬೇಕು ಎಂಬುದನ್ನು ನಿರ್ಧರಿಸಿ.
- ಪಾಠವು ಹೇಗೆ ಉತ್ತಮವಾಗಿ ಮೂಡಿಬಂದಿತು ನಿಮ್ಮ ವಿದ್ಯಾರ್ಥಿಗಳು ಏನನ್ನು ಕಲಿತರು ಎಂಬುದನ್ನು ಅವಲೋಕಿಸಿದಾಗ, ಮುಂದಿನ ದಿನಗಳಲ್ಲಿ ಯೋಜನೆಯನ್ನು ತಯಾರಿಸಲು ಸಹಾಯಕ.

**ಪಾಠಗಳ ಸರಣಿಗಳನ್ನು ಯೋಜಿಸುವುದು**

ನೀವು ಪಠ್ಯಕ್ರಮವನ್ನು ಅನುಸರಿಸುವಾಗ, ಯೋಜನೆಯ ಮೊದಲ ಹಂತವು ಎಷ್ಟು ಉತ್ತಮವಾಗಿ ಪಠ್ಯಕ್ರಮದಲ್ಲಿರುವ ವಿಷಯಗಳನ್ನು ಹಾಗೂ ವಿಷಯಗಳನ್ನು ವಿಭಾಗಗಳಾಗಿ ಅಥವಾ ಸಣ್ಣ ತುಂಡುಗಳಾಗಿ ವಿಂಗಡಿಸುವುದು ಎನ್ನುವುದನ್ನು ಮಾಡಿಕೊಳ್ಳುವುದು. ನೀವು ಸಿಗುವ ಸಮಯಾವಕಾಶವನ್ನು ಹಾಗೂ ನಿಧಾನವಾಗಿ, ಜ್ಞಾನ ಮತ್ತು ಕೌಶಲಗಳ ಬೆಳವಣಿಗೆಯಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಪ್ರಗತಿಯನ್ನು ಕಂಡುಕೊಳ್ಳುವ ಮಾರ್ಗಗಳನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯತೆಯಿದೆ. ನಿಮ್ಮ ಅನುಭವ ಅಥವಾ ಸಹೋದ್ಯೋಗಿಗಳೊಂದಿಗೆ ಚರ್ಚೆಯು ಒಂದು ಸಂಗತಿಯನ್ನು ನಾಲ್ಕು ಪಾಠಗಳಾಗಿ ತೆಗೆದುಕೊಳ್ಳಬಹುದು ಎನ್ನುವುದನ್ನು ತಿಳಿಸಬಹುದು, ಆದರೆ ಮತ್ತೊಂದು ವಿಷಯವು ಕೇವಲ 2 ಪಾಠಗಳಾಗಬಹುದು. ವಿವಿಧ ಮಾರ್ಗಗಳ ಮೂಲಕ ಹಾಗೂ ವಿವಿಧ ಸಮಯಗಳಲ್ಲಿ ಮುಂದಿನ ಪಾಠಗಳಿಗೆ ಹಿಂದಿನ ಕಲಿಕೆಯು ಬೇಕಾಗಬಹುದು ಎಂಬುದರ ಕುರಿತು ನೀವು ಜಾಗೃತರಾಗಿರಬೇಕು, (ವಿಷಯವು ಮುಂದುವರೆದಾಗ ಅಥವಾ ಇತರ ವಿಷಯಗಳನ್ನು ಒಳಗೊಳ್ಳುವಾಗಲೂ ಸಹಿತ.)

ಎಲ್ಲ ಪಾಠ ಯೋಜನೆಗಳಲ್ಲಿಯೂ ನೀವು ಈ ಕೆಳಗಿನವುಗಳ ಕುರಿತು ಸ್ಪಷ್ಟತೆಯನ್ನು ಹೊಂದಿರುವ ಅವಶ್ಯಕತೆಯಿದೆ

- ವಿದ್ಯಾರ್ಥಿಗಳು ಏನನ್ನು ಕಲಿಯಬೇಕು ಎಂದು ನೀವು ಅಪೇಕ್ಷಿಸುವಿರಿ
- ಆ ಕಲಿಕೆಯನ್ನು ನೀವು ಹೇಗೆ ಪ್ರಾರಂಭಿಸುವಿರಿ
- ವಿದ್ಯಾರ್ಥಿಗಳು ಏನನ್ನು ಮಾಡಬೇಕು ಮತ್ತು ಏಕೆ?

ವಿದ್ಯಾರ್ಥಿಗಳು ಕುತೂಹಲ ಹಾಗೂ ಹಿತಕರವಾದ ಅನುಭವವನ್ನು ಪಡೆಯಬೇಕಾಧರೆ ನೀವು ಕಲಿಕೆಯನ್ನು ಆಸಕ್ತಿ ಹಾಗೂ ಕ್ರೀಯಾಶೀಲವಾಗಿರುವಂತೆ ಮಾಡಬೇಕಾಗುತ್ತದೆ.

ವಿದ್ಯಾರ್ಥಿಗಳು ಮಾಡಬೇಕಾಗಿರುವುದನ್ನು ಸರಣಿ ಪಾಠಗಳ ಸರಣಿಯುದ್ದಕ್ಕೂ ಗಣನೆಗೆ ತೆಗೆದುಕೊಳ್ಳುವುದರಿಂದ ವಿವಿಧತೆಯನ್ನು ಹಾಗೂ ಆಸಕ್ತಿಯನ್ನು ಬೆಳೆಸಬಹುದು. ಆದರೆ ನಮ್ಯತೆಯನ್ನು ಸಹ ಗಣನೆಗೆ ತೆಗೆದುಕೊಳ್ಳುವುದು. ಪಾಠಗಳ ಸರಣಿಯಲ್ಲಿಯ ಪ್ರಗತಿಯಿಂದ, ವಿದ್ಯಾರ್ಥಿಗಳ ಅರ್ಥೈಸುವಿಕೆಯನ್ನು ಹೇಗೆ ಪರೀಕ್ಷಿಸುವಿರಿ ಎಂಬುದನ್ನು ನಿಯೋಜಿಸಬೇಕು ಕೆಲವು ವಿಷಯಗಳು ಹೆಚ್ಚಿನ ಸಮಯವನ್ನು ತೆಗೆದುಕೊಂಡಾಗ ಅಥವಾ ಗ್ರಹಿಸಿದಾಗ ಬಹಳಷ್ಟು ಸಮಯವನ್ನು ಅಥವಾ ಕೆಲವು ಬೇಗ ಅರ್ಥವಾಗುವುದರಿಂದ ನೀವು ನಮ್ಯರಾಗಿಬೇಕಾಗುತ್ತದೆ.

**ಒಂದು ಪಾಠವನ್ನು ಸಿದ್ಧಪಡಿಸುವುದು**

ನೀವು ಪಾಠ ಸರಣಿಗಳನ್ನು ಯೋಜಿಸಿದ ನಂತರ, ಪ್ರತಿಯೊಂದು ಪಾಠವನ್ನು ವಿದ್ಯಾರ್ಥಿಗಳು ಅಲ್ಲಿಯವರೆಗೆ ಮಾಡಿದ ಪ್ರಗತಿಯನ್ನು ಆಧರಿಸಿ ಯೋಜಿಸಬೇಕು. ವಿದ್ಯಾರ್ಥಿಗಳು ಏನು ಕಲಿತಿರುವವರು ಅಥವಾ ಪಾಠಗಳ ಸರಣಿಯ ಅಂತ್ಯದಲ್ಲಿ ಏನನ್ನು ಮಾಡಲು ಸಮರ್ಥರಾಗಿರುವರು ಎಂಬುದು ನಿಮಗೆ ಗೊತ್ತಿರುತ್ತದೆ. ಆದರೆ ನೀವು ಕೆಲವು ಅನಿರೀಕ್ಷಿತ ಅಥವಾ ಅವಸರವಾಗಿ ಮುಂದೂಡಿದ ವಿಷಯಗಳ ಕುರಿತು

ಪುನರಾವರ್ತಿಸುವ ಅವಶ್ಯಕತೆಯಿದೆ. ಆದ್ದರಿಂದ ಪ್ರತಿಯೊಂದು ಪಾಠವನ್ನು ಯೋಜಿಸುವಾಗ ನಿಮ್ಮ ಎಲ್ಲಾ ವಿದ್ಯಾರ್ಥಿಗಳು ಪ್ರಗತಿಯನ್ನು ಸಾಧಿಸುವಂತೆ ಹಾಗೂ ಯಶಸ್ಸಿನ ಅನುಭವ ಪಡೆಯುವಂತಾಗಬೇಕು.

ಪಾಠ ಯೋಜನೆಯಲ್ಲಿ ಪ್ರತಿಯೊಂದು ಚಟುವಟಿಕೆಗೆ ಸಾಕಷ್ಟು ಸಮಯ ನೀಡಿರುವುದನ್ನು ಹಾಗೂ ಪ್ರಾಯೋಗಿಕ ಕಾರ್ಯ ಮತ್ತು ಗುಂಪು ಚಟುವಟಿಕೆಗಳಿಗೆ ಬೇಕಾಗುವ ಸಂಪನ್ಮೂಲಗಳನ್ನು  ಸಿದ್ಧಪಡಿಸಿಕೊಂಡಿರುವುದನ್ನು ಖಚಿತಪಡಿಸಿಕೊಳ್ಳಿರಿ. ಹೆಚ್ಚು ವಿದ್ಯಾರ್ಥಿಗಳಿರುವ ತರಗತಿಗಳಿಗೆ ವಸ್ತುಗಳನ್ನು ಯೋಜಿಸುವ ನಿಟ್ಟಿನಲ್ಲಿ ನಿಮಗೆ ವಿವಿಧ ಗುಂಪುಗಳಿಗೆ ಪ್ರಶ್ನೆಗಳು ಹಾಗೂ ಚಟುವಟಿಕೆಗಳನ್ನು ಯೋಜಿಸುವ ಅವಶ್ಯಕತೆಯಿದೆ.

ನೀವು ಹೊಸ ವಿಷಯಗಳನ್ನು ಬೋಧಿಸುವಾಗ ನಿಮಗೆ ಅಭ್ಯಾಸ ಮಾಡಲು ಸಮಯದ ಅವಶ್ಯಕತೆಯಿದೆ ಹಾಗೂ ನಿಮ್ಮ ವಿಚಾರಗಳನ್ನು ಇತರ ಶಿಕ್ಷಕರೊಂದಿಗೆ ಹಂಚಿಕೊಳ್ಳುವುದರಿಂದ ನಿಮ್ಮ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ನಿಮ್ಮ ಪಾಠಗಳನ್ನು ತಯಾರಿಸಲು ಮೂರು ಭಾಗಗಳನ್ನು ಆಲೋಚಿಸಿರಿ. ಈ ಭಾಗಗಳನ್ನು ಕೆಳಗೆ ಚರ್ಚಿಸಲಾಗಿದೆ.

**1. ಪೀಠಿಕೆ**

ಪಾಠವನ್ನು ಪ್ರಾರಂಭಿಸುವಾಗ, ವಿದ್ಯಾರ್ಥಿಗಳಿಗೆ ಏನನ್ನು ಕಲಿಯುವರು ಹಾಗೂ ಮಾಡುವರು ಎಂಬುದನ್ನು ವಿವರಿಸಿರಿ. ಇದರಿಂದ ಪ್ರತಿಯೊಬ್ಬರೂ ಅವರಿಂದ ಅಪೇಕ್ಷಿಸುವುದೇನು ಎನ್ನುವುದನ್ನು ಗೊತ್ತುಪಡಿಸಿಕೊಳ್ಳುವರು. ಅವರಿಗೆ ಈಗಾಗಲೇ ಗೊತ್ತಿರುವುದೇನು ಎಂಬುದನ್ನು ಹಂಚಿಕೆ ಮಾಡಿಕೊಳ್ಳುವುದರಿಂದ /ಚರ್ಚಿಸುವುದರಿಂದ ಅವರು ಏನು ಕಲಿಯಬೇಕು ಎಂಬುದರ ಕಡೆಗೆ ವಿದ್ಯಾರ್ಥಿಗಳ ಆಸಕ್ತಿಯನ್ನುಂಟು ಮಾಡುವುದು

**2. ಪಾಠದ ಮುಖ್ಯ ಭಾಗ**

ವಿದ್ಯಾರ್ಥಿಗಳಿಗೆ ಈಗಾಗಲೇ ಗೊತ್ತಿರುವುದನ್ನು ಆಧರಿಸಿ, ವಿಷಯವನ್ನು ಸಂಕ್ಷಿಪ್ತವಾಗಿ ಬರೆಯಿರಿ. ನೀವು ಸ್ಥಳೀಯ ಸಂಪನ್ಮೂಲಗಳನ್ನು, ಹೊಸ ಮಾಹಿತಿಯನ್ನು ಅಥವಾ ಸಮಸ್ಯಾ ಪರಿಹಾರ ಅಥವಾ ಗುಂಪುಕಾರ್ಯಗಳಂತಹ ಕ್ರಿಯಾಶೀಲ ವಿಧಾನಗಳ ಬಳಕೆಯನ್ನು ನಿರ್ಧರಿಸಬೇಕು. ನಿಮ್ಮ ತರಗತಿಯಲ್ಲಿರುವ ಸ್ಥಳವನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುವಂತೆ ಹಾಗೂ ಬಳಸಲು ಬರುವಂತಹ ಸಂಪನ್ಮೂಲಗಳನ್ನು ಗುರುತಿಸಿ. ವಿವಿಧ ಚಟುವಟಿಕೆಗಳನ್ನು ಬಳಸುವುದು. ಸಂಪನ್ಮೂಲಗಳು, ಸಮಯ, ಇವೆಲ್ಲವೂ  ಪಾಠ ಯೋಜನೆಯ ಪ್ರಮುಖ ಭಾಗವಾಗಿರುತ್ತವೆ. ನೀವು ವಿವಿಧ ವಿಧಾನಗಳನ್ನು ಹಾಗೂ ಚಟುವಟಿಕೆಗಳನ್ನು ಬಳಸಿದರೆ, ನೀವು ಬಹಳಷ್ಟು ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನುಂಟು ಮಾಡಿದಂತಾಗುತ್ತದೆ. ಯಾಕೆಂದರೆ ಅವರು ಬೇರೆ ಬೇರೆ ವಿಧಾನಗಳಲ್ಲಿ ಕಲಿಯುತ್ತಾರೆ.

**3. ಪಾಠದ ಕೊನೆಯಲ್ಲಿ ಕಲಿಕೆಯನ್ನು ಪರೀಕ್ಷಿಸಿ**

ಎಷ್ಟು ಪ್ರಗತಿಯಾಗಿದೆ ಎಂಬುದನ್ನು ಕಂಡುಕೊಳ್ಳಲು ಯಾವಾಗಲೂ ಸಮಯವನ್ನು ನಿಗದಿಪಡಿಸಿಕೊಳ್ಳಿ. (ಪಾಠ ಮಾಡುವಾಗ ಅಥವಾ ಪಾಠದ ಕೊನೆಯಲ್ಲಿ). ಯಾವಾಗಲೂ ಪರೀಕ್ಷಿಸುವುದು ಎನ್ನುವುದು ಪರೀಕ್ಷೆ ಎಂಬ ಅರ್ಥವಲ್ಲ. ಸಾಮಾನ್ಯವಾಗಿ ಇದು ಆ ಕ್ಷಣದಲ್ಲಿ ಹಾಗೂ ಅತಿ ಬೇಗನೆ - ಯೋಜಿಸಿದ ಪ್ರಶ್ನೆಗಳು ಅಥವಾ ವಿದ್ಯಾರ್ಥಿಗಳು ಕಲಿತ ವಿಷಯವನ್ನು ಮಂಡಿಸುವಾಗ ವೀಕ್ಷಿಸುವುದು ಆದರೆ ನಿಮ್ಮ ಯೋಜನೆ ನಮ್ಯತೆಯಿಂದ ಕೂಡಿರಬೇಕು ಹಾಗೂ ನೀವು ವಿದ್ಯಾರ್ಥಿಗಳಿಂದ ಕಂಡುಕೊಂಡ ಪ್ರತಿಕ್ರಿಯೆಗಳಿಗನುಸಾರವಾಗಿ ಬದಲಾವಣೆಯನ್ನು ಮಾಡಿಕೊಳ್ಳಬೇಕು.

ಪಾಠವನ್ನು ಮುಕ್ತಾಯಗೊಳಿಸುವ ಒಂದು ಉತ್ತಮ ಮಾರ್ಗವು, ಪ್ರಾರಂಭದ ಗುರಿಗಳಿಗೆ ಹಿಂತಿರುಗುವುದಾಗಿದೆ. ವಿದ್ಯಾರ್ಥಿಗಳು ಇತರ ವಿದ್ಯಾರ್ಥಿಗಳೊಂದಿಗೆ ಮತ್ತು ನಿಮ್ಮೊಂದಿಗೆ ಕಲಿಕೆಯಿಂದುಂಟಾದ ಪ್ರಗತಿಯ ಬಗ್ಗೆ ಚರ್ಚಿಸಲು ಸಾಕಷ್ಟು ಸಮಯಾವಕಾಶವನ್ನು ನೀಡಬೇಕು.

ವಿದ್ಯಾರ್ಥಿಗಳು ಹೇಳುವುದನ್ನು ಆಲಿಸುವುದರಿಂದ, ನೀವು ಮುಂದಿನ ಪಾಠವನ್ನು ಯಾವ ರೀತಿ ಯೋಜಿಸಬೇಕೆಂದು ಗೊತ್ತುಪಡಿಸಿಕೊಳ್ಳಲು ನೆರವಾಗುತ್ತದೆ.

**ಪಾಠಗಳನ್ನು ಪರಿಶೀಲಿಸುವುದು**

ಹಿಂದೆ ಮಾಡಿದ ಪ್ರತಿಯೊಂದು ಪಾಠವನ್ನು ಅವಲೋಕಿಸಿ ಹಾಗೂ ನೀವು ಮಾಡಿದ ಪಾಠಗಳಲ್ಲಿರುವ ಅಂಶಗಳನ್ನು ದಾಖಲಿಸಿರಿ.

ನೀವು ಹಿಂದೆ ಮಾಡಿದ ಪ್ರತಿಯೊಂದು ಪಾಠವನ್ನು ಪುನರ್ ಅವಲೋಕಿಸಿರಿ ಹಾಗೂ ದಾಖಲೆಯನ್ನು ಇಡಿರಿ. ನಿಮ್ಮ ವಿದ್ಯಾರ್ಥಿಗಳು ಏನನ್ನು ಕಲಿತರು, ನೀವು ಯಾವ ಸಂಪನ್ಮೂಲಗಳನ್ನು ಬಳಸಿದಿರಿ ಹಾಗೂ ಪಾಠವನ್ನು ಹೇಗೆ ಉತ್ತಮವಾಗಿ ಮಾಡಲಾಯಿತು ಎಂಬುದು, ನಂತರದ

ಪಾಠಗಳನ್ನು ಯೋಜಿಸುವಾಗ ನೀವು ಮಾಡಬೇಕಾದ ಸುಧಾರಣೆಗಳು ಅಥವಾ ಬದಲಾವಣೆಗಳನ್ನು ತಿಳಿಯಲು ಸಹಾಯಕವಾಗುತ್ತದೆ. ಉದಾಹರಣೆಗೆ, ನೀವು ಈ ಕೆಳಗಿನವುಗಳನ್ನು ನಿರ್ಧರಿಸಬಹುದು

- ಚಟುವಟಿಕೆಗಳ ಬದಲಾವಣೆ ಅಥವಾ ಮಾರ್ಪಾಡು
- ಅನೇಕ ಮುಕ್ತ ಮತ್ತು ನಿರ್ಬಂಧಿತ ಪ್ರಶ್ನೆಗಳನ್ನು ತಯಾರಿಸುವುದು
- ಹೆಚ್ಚಿನ ಬೆಂಬಲದ ಅವಶ್ಯಕತೆಯಿರುವ ಮಕ್ಕಳಿಗೆ ಅನುಪಾಲನಾ ಅವಧಿಗಳನ್ನು ನೀಡುವುದು

ವಿದ್ಯಾರ್ಥಿಗಳು ಕಲಿಯಲು ಇನ್ನೂ ಉತ್ತಮವಾಗಿ ನೀವು ಏನನ್ನು ಮಾಡಬಹುದು ಹಾಗೂ ಯೋಜಿಸಬಹುದು ಎಂಬುದನ್ನು ಕುರಿತು ಆಲೋಚಿಸಿರಿ.

ನೀವು ಪ್ರತಿಯೊಂದು ಪಾಠವನ್ನು ಮಾಡುವಾಗ ನಿಮ್ಮ ಪಾಠ ಯೋಜನೆಯು ಬದಲಾವಣೆಗೊಳಪಡಲೇಬೇಕಾಗಬಹುದು, ಯಾಕೆಂದರೆ ಪ್ರತಿಯೊಂದನ್ನು ಏನಾಗಬಹುದು ಎಂದು ನೀವು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಉತ್ತಮ ಯೋಜನೆ ಎಂಬುದರ ಅರ್ಥ ಯಾವ ರೀತಿಯ ಕಲಿಕೆಯಾಗಬೇಕು ಎಂಬುದು ನಿಮಗೆ ತಿಳಿದಿರಬೇಕು. ವಿದ್ಯಾರ್ಥಿಗಳ ನೈಜವಾದ ಕಲಿಕೆಯಲ್ಲಿ ನೀವು ಕಂಡುಕೊಳ್ಳುವ ಅಂಶಗಳಿಗೆ ನೀವು ನಮ್ಯತೆಯಿಂದ ಪ್ರತಿಕ್ರಿಯಿಸಲು ತಯಾರಿಮಾಡಿಕೊಂಡಿರಬೇಕು.

## ಹೆಚ್ಚುವರಿ ಸಂಪನ್ಮೂಲಗಳು

- A language activity using newspapers: http://www.teachersofindia.org/en/article/classroom-sparkler-newspaper
- Some writing resources can be found on the Azim Premji Foundation website: http://www.azimpremjifoundation.org/E-learning_Resources
- You may be able to find some resources on the NUEPA website: http://www.nuepa.org/
- Support for teachers can be found on the Teacher Education website of MHRD: http://www.teindia.nic.in

## ಪರಾಮರ್ಶನ ಗ್ರಂಥಗಳು/ಗ್ರಂಥಸೂ

Black Country Children's Services Improvement Partnership (undated) *Black Country Challenge KS1 & 2 Writing Project 2009/2010* (online). Wolverhampton: Black Country Children's Services Improvement Partnership. Available from: http://www.gillmatthews.co.uk/images/downloads/bcc%20writing%20project_FINAL.PDF (accessed 29 October 2014).

Katahira, J. (undated) 'Note writing in the primary classroom' (online), ReadWriteThink. Available from: http://www.readwritethink.org/classroom-resources/lesson-plans/note-writing-primary-classroom-285.html?tab=4#tabs (accessed 29 October 2014).

Kopp, K. (2008a) *Learning through Writing, Grade 3: Authentic Writing Activities for the Content Areas*. Gainsville, FL: Maupin House Publishing.

Kopp, K. (2008b) *Learning through Writing, Grade 5: Authentic Writing Activities for the Content Areas*. Gainsville, FL: Maupin House Publishing.

Lidvall, C.D. (2008) *Get Real: Instructional Implications for Authentic Writing Activities* (online), DiscoverArchive, Vanderbilt University. Available from: http://discoverarchive.vanderbilt.edu/bitstream/handle/1803/789/CarlyLidvallCapstone.pdf?sequence=1 (accessed 29 October 2014).

O'Sullivan. O. (2007) *Understanding Spelling*, London: Centre for Literacy in Primary Education.

Pavlock, K. (undated) 'Writing for the real world' (online), ReadWriteThink. Available from: http://www.readwritethink.org/parent-afterschool-resources/tips-howtos/writing-real-world-30115.html (accessed 29 October 2014).

Wilcox, A. (undated) 'Literary resource: writing for purpose' (online), Teach Primary. Available from: http://www.teachprimary.com/learning_resources/view/literacy-resource-writing-for-purpose (accessed 29 October 2014).

## Acknowledgements

This content is made available under a Creative Commons Attribution-ShareAlike licence (http://creativecommons.org/licenses/by-sa/3.0/), unless identified otherwise. The licence excludes the use of the TESS-India, OU and UKAID logos, which may only be used unadapted within the TESS-India project.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.